Neb

# SAMPLE PAPER FOR SUMMATIVE ASSESSMENT - I Set I
## FIRST TERM 2011-12

**SUB : KANNADA** **M.MARKS: 90** **TIME: 3 Hrs**

**CLASS-IX**

***ಸೂಚನೆಗಳು :*** *1. ಈ ಪ್ರಶ್ನೆ ಪತ್ರಿಕೆಯು ಎ,ಬಿ,ಸಿ, ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.*

- *ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು*
- *ವಿಭಾಗ–B (ಬರವಣಿಗೆ ಕೌಶಲ) : 14 ಅಂಕಗಳು*
- *ವಿಭಾಗ–C (ಅನ್ವಯಿಕ ವ್ಯಾಕರಣ) : 14 ಅಂಕಗಳು*
- *ವಿಭಾಗ–D (ಪಠ್ಯಗಳ ಅಧ್ಯಯನ) : 50 ಅಂಕಗಳು*

---

## ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : (*12 ಅಂಕಗಳು*)

I. 1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಜನರು ಅಭಿಮಾನಧನರೂ, ಬುದ್ಧಿಶಾಲಿಗಳೂ, ಪ್ರಯೋಗಶೀಲರೂ ಆಗಿರಬೇಕು. ನಾಲ್ಕೈದು ಶತಮಾನಗಳ ಹಿಂದೆ ಆಂಗ್ಲ ಭಾಷೆ ಯೂರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಆಂಗ್ಲ ಜನತೆ ಸಾಹಸ ಜೀವಿಯಾಯಿತು, ಬುದ್ಧಿಶಾಲಿಯಾಯಿತು. ಸೂರ್ಯನು ಎಂದೂ ಮುಳುಗನೆನ್ನುವಂತಹ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿತು. ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು, ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದವುಗಳನ್ನು ಆ ಭಾಷೆಯ ಮುಖಾಂತರವೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆಂಗ್ಲ ಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ.ಇದಕ್ಕೆಲ್ಲ ಆಂಗ್ಲ ಜನರ ಸಂಕಲ್ಪ,ಕೃಷಿ ಕಾರಣವೆಂದು ಬೇರೆ ಹೇಳಬೇಕಿಲ್ಲ.

ಸ್ವಭಾಷೆಯನ್ನು ಪ್ರಿತಿಸಬೇಕು, ಗೌರವಿಸಬೇಕು,ಬೆಳೆಸಬೇಕು ಎಂದರೆ ಅನ್ಯ ಭಾಷೆಗಳನ್ನು ತಿರಸ್ಕರಿಸಬೇಕೆಂದು ಅರ್ಥವಲ್ಲ. ಭಾಷೆಗಳಲ್ಲಿ ಮೇಲು– ಕೀಳೆಂಬುದಿಲ್ಲ. ನಾಲ್ಕು ಜನ ಮಾತನಾಡುತ್ತಿದ್ದ ಭಾಷೆಗೂ ನಲವತ್ತು ಲಕ್ಷ ಜನ ಮಾತನಾಡುತ್ತಿದ್ದ ಭಾಷೆಗೂ ಸತ್ವ ಹಾಗೂ ಸತ್ವದೃಷ್ಟಿಯಿಂದ ಅಂತರವೇ ಇಲ್ಲ. ಎಲ್ಲ ಭಾಷೆಗಳೂ ಅಷ್ಟೇ. ಒಬ್ಬ ತಾಯಿಯ ಗಾನದ ಶೃತಿಯಂತೆ ಎಲ್ಲಕ್ಕೂ ಅಷ್ಟೇ ಸ್ಥಾನವಿದೆ. ಇದನ್ನರಿತು ಭಾರತೀಯರಾದ ನಾವು ನೆರೆಹೊರೆಯ ಭಾಷೆಗಳನ್ನು ದ್ವೇಷಿಸದೆ, ಸ್ವಭಾಷೆಯನ್ನು ಗೌರವಿಸಿ,ಪ್ರೀತಿಸಿ ಅಭಿವೃದ್ಧಿಗೊಳಿಸಿದರೆ ದೇಶದ ಸಂಸ್ಕೃತಿ ಮುಂದುವರೆಯುತ್ತದೆ.

ಪ್ರಶ್ನೆಗಳು:

ಅ) ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಏನು ಮಾಡಬೇಕು? 1

ಆ) ಆಂಗ್ಲ ಪಂಡಿತರು ತಮ್ಮ ಭಾಷೆಯನ್ನು ಹಿಗ್ಗಿಸಲು ಏನು ಮಾಡಿದರು? 2

ಇ) ಇಂದು ಆಂಗ್ಲ ಭಾಷೆ ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಲು ಕಾರಣವೇನು? 2

ಈ) ದೇಶದ ಸಂಸ್ಕೃತಿಯನ್ನು ಮುಂದುವರೆಸಲು ಭಾರತೀಯರಾದ ನಾವೇನು ಮಾಡಬೇಕು? 1

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಕಾಲು ದಾರಿಯ ಮೇಲೆ ಕಣ್ಣಿಟ್ಟು ನಡೆಯಣ್ಣ
ಎಲ್ಲೆಂದರಲ್ಲಿ ನೀ ದಾಟಬೇಡ;
ದಾರಿಯ ತುಂಬ ನಿಂತ ಹಲಗೆಯ ಮಾತ
ಅರಿತು ನಡೆ ನಿನಗೆ ಕ್ಷೇಮ!

ಚೌಕ ಚೌಕದ ನಡುವೆ ಖಾಕಿ ಬಟ್ಟೆಯ ಬೆರಳ
ಸನ್ನೆಯಲಿ ಬಿಡು ನಿನ್ನ ವಾಹನ;
ಕೆಂಪು–ಹಸುರಿನ ಮುಖದ ದೀಪಗಳ ಕಣ್ಣರಿತು
ಮುಂದೆ ನಡೆ, ಬೇಡ ಚಪಲ!

ನುಗ್ಗದಿರು ಮಂದಿಯಲಿ; ಏನಾದರೂ ನಿನ್ನ
ಜೇಬು ಜೋಪಾನ;
ಹೋಗುತ್ತಲೆ ಇರಬೇಕು ಈ ಹೊಳೆಯಲ್ಲಿ
ನಿಂತರೂ ದಡಹಿಡಿದು ಏರು ಸೋಪಾನ!

ಅಲ್ಲಲ್ಲಿ 'ಕ್ಯೂ'ನಿಂತು ಬಸ್ಸನು ಹತ್ತು; ಒತ್ತದಿರು
ನಿನಗಿಂತ ಮೊದಲೆ ಬಂದವರ;
ಬಸ್ಸಿನೊಳಗೂ ನೀನು ನಿಂತರೂ ಏನಂತೆ
ಎಷ್ಟು ಹೊತ್ತಿನ ಪಯಣ; ಏನಾತುರ!

ಇದು ನಗರ, ಸಾವಿರ ದಾರಿ ಸಾವಿರ ಬೆಳಕು
ತೊಡರುವುದು ಕಾಲಿಗೆ;
ನೂರಾರು ವಾಹನದ ಹೆಜ್ಜೆ ಸದ್ದಿನ ಜೊತೆಗೆ
ನೀ ಬರುವೆ ಮನೆಗೆ
ಅಲ್ಲಿಯ ತನಕ ಕಾತರವೆ ನನಗೆ!

– ಜಿ.ಎಸ್. ಶಿವರುದ್ರಪ್ಪ.

ಪ್ರಶ್ನೆಗಳು:

ಅ) ಕಾಲು ದಾರಿಯ ಮೇಲೆ ಹೇಗೆ ನಡೆಯಬೇಕೆಂದು ಕವಿ ಹೇಳಿದ್ದಾನೆ 1

ಆ) ಏನನ್ನು ಅರಿತು ವಾಹನವನ್ನು ಓಡಿಸಬೇಕು? 2

ಇ) ಜೇಬನ್ನು ಜೋಪಾನವಾಗಿಟ್ಟುಕೊಳ್ಳಲು ನಾವು ಏನು ಮಾಡಬೇಕು? 1

ಈ) ಕವಿಯ ಕಾತರವೇನು? 2

## ವಿಭಾಗ–B (ಬರವಣಿಗೆ ಕೌಶಲ) : (14 ಅಂಕಗಳು)

II. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ೧೫೦ ಪದಗಳಿಗೆ ಮೀರದಂತೆ ನಿಬಂಧ ಬರೆಯಿರಿ. 6

೧. ನನ್ನ ಮೆಚ್ಚಿನ ಪುಸ್ತಕ ೨. ಪರಿಸರ ಮಾಲಿನ್ಯ. ೩. ದೂರದರ್ಶನ

III. ನೀವು ಎ.ರಾಜು ಸರ್ಕಾರಿ ಪ್ರೌಢ ಶಾಲೆ, ಬಳ್ಳಾರಿ ಎಂದು ಭಾವಿಸಿ ಬೆಂಗಳೂರಿನ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ ನಿಮ್ಮ ಗೆಳೆಯ ಸಂಜಯನಿಗೆ ನೀವು ಮಾಡಿದ ಪ್ರವಾಸದ ಅನುಭವಗಳನ್ನು ತಿಳಿಸುತ್ತ ಪತ್ರ ಬರೆಯಿರಿ. 4

IV. ಕೆಳಗಿನ ಗದ್ಯಭಾಗವನ್ನು ಓದಿ ಅದರ ಮುಖ್ಯಾಂಶಗಳನ್ನು ಸಂಕ್ಷೇಪಿಸಿ ಬರೆಯಿರಿ. 4

ಮೂರನೆಯ ಸಹಸ್ರಮಾನ ಆರಂಭ. ಇತಿಹಾಸ ಪುಟಗಳನ್ನು ಗಮನಿಸಿದರೆ ಮೊದಲೆರಡು ಸಹಸ್ರಮಾನಗಳು ಭಾರತದ ನೆಲದಲ್ಲಿ ತೀವ್ರ ಸಂಘರ್ಷದ ನೆಲೆಯಾಗಿದ್ದನ್ನು ಕಾಣಬಹುದು. ಮೊದಲ ಸಹಸ್ರಮಾನ ದೇಶಿ ಒಳಜಗಳ ಘರ್ಷಣೆಗಳ ನೆಲೆಯಾಗಿದ್ದರೆ, ಎರಡನೆಯ ಸಹಸ್ರಮಾನ ವಿದೇಶಿ ಆಕ್ರಮಣ , ಅತಿಕ್ರಮಣಗಳ ರಕ್ತದೋಕುಳಿಯ ನರ್ತನಾಲಯ. ಇವೆರಡೂ ಸಹಸ್ರಮಾನಗಳ ಆಂತರಿಕ ಒಳಜಗಳ ಮತ್ತು ವಿದೇಶಿ ತಂಟೆ ಮೂರನೆಯ ಸಹಸ್ರಮಾನಕ್ಕೆ ಕಾಣಿಕೆಯಾಗಿ ಅಡಿಯಿಟ್ಟಿವೆ.

ಯುದ್ಧ, ಇತಿಹಾಸದುದ್ದಕ್ಕೂ ತನ್ನ ಇರುವಿಕೆಯನ್ನ ತೋರಿಸುತ್ತಾ ಬಂದಿದೆ. ಯಾವುದೇ ಸಾಮ್ರಾಜ್ಯದ ಏಳುಬೀಳುಗಳಲ್ಲಿ ಅದು ಪ್ರಮುಖ ಪಾತ್ರ ವಹಿಸಿದೆ. ಯುದ್ಧ ನಡೆಯಲು ಕಾರಣಗಳು ಹಲವು. ಸಾಮ್ರಾಜ್ಯದ ವಿಸ್ತರಣೆ, ಲೋಭ, ವೀರತೆಯ ಪ್ರದರ್ಶನ ಒಂದುಕಡೆಯಾದರೆ, ಕುಟುಂಬ ಕಲಹಗಳೂ ಯುದ್ಧಕ್ಕೆ ನಾಂದಿಹಾಡಿದ ಘಟನೆಗಳು ದಾಖಲಾಗಿವೆ. ಸುಮಾರು ಐದುಸಾವಿರ ವರ್ಷಗಳ ಹಿಂದೆ ನಡೆದ ಕುರುಕ್ಷೇತ್ರ ಯುದ್ಧ ಇದಕ್ಕೆ ಸ್ಪಷ್ಟ ನಿದರ್ಶನ. ಕುರುವಂಶದ ರಾಜಕುಮಾರರ ಅಂತಃಕಲಹ ಐವತ್ತು ಲಕ್ಷ ಜನರ ಪ್ರಾಣ ಹಾನಿಯೊಂದಿಗೆ ಪರ್ಯವಸಾನವಾಯಿತು. ಐತಿಹ್ಯದಂತೆ ಕೇವಲ ಹದಿನೆಂಟು ದಿನ ನಡೆದ ಈ ಯುದ್ಧ ಕಂಡ ಪರಿಣಾಮ ಅತ್ಯಂತ ಘೋರ.

ಭಾರತ ತನ್ನ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು. ತನ್ನ ಹಠದ ಪಟ್ಟನ್ನು ಸಡಿಲಿಸದೆ, ಮನೋನಿಶ್ಚಯದಂತೆ ಅಪೂರ್ವಕುಶಲತೆಯನ್ನು ತೋರಿದ ಪ್ರತಿಭಾವಂತನೀತ. ತನ್ನನ್ನೇ ಅರಸಿಬಂದ ರಾಜ್ಯಲಕ್ಷ್ಮಿ, ಅಧಿಕಾರ ದೂರಿಕರಿಸಿ ವಿರಕ್ತನಂತೆ ಆಶ್ರಮವಾಸಿಯಾಗುತ್ತಾನೆ. ಚಾಣಕ್ಯನ ಪ್ರಕಾರ ಯುದ್ಧದಲ್ಲಿ ಮೂರು ವಿಧಗಳು. ಮೊದಲನೆಯದು ಪ್ರಕಾಶಯುದ್ಧ– ಸೂಚಿಸಿದ ಸ್ಥಳದಲ್ಲಿ ನಿರ್ದಿಷ್ಟ ಸಮಯಕ್ಕೆ ನಡೆಯುವ ಸಂಗ್ರಾಮ. ಎರಡನೆಯದು ಕೂಟಯುದ್ಧ– ತಂತ್ರಗಳ ಮೂಲಕ ಯುದ್ಧಮಾಡುವುದು. ಮೂರನೆಯದು ಮೌನಯುದ್ಧ– ಶತ್ರು ಅಧಿಕಾರಿಗಳನ್ನು ನಾಶಪಡಿಸಲು ಗುಪ್ತ ಕಾರ್ಯಾಚರಣೆ ನಡೆಸುವುದು.

## ವಿಭಾಗ–C (ವ್ಯಾಕರಣ) : (14 ಅಂಕಗಳು)

V. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ 2

   ವೇದಾಧ್ಯಯನ ನಾವೆಲ್ಲ

2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ 2

   ಹೆದ್ದಾರಿ ಬೆಟ್ಟಗುಡ್ಡ

3. 'ಶಿಸ್ತಿನ ಸಿಪಾಯಿ'- ಈ ಪಡೆನುಡಿಯನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ. 1

4. ಕೆಳಗಿನವುಗಳಿಗೆ ತತ್ಸಮ/ತದ್ಭವ ರೂಪ ಬರೆಯಿರಿ. 1

ಕಾವ್ಯ ಅಂಚೆ

5. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ. 1

ಕಡಲು ವಸ್ತ್ರ

6. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ 1

ಪ್ರಾಚೀನ ವಿದ್ಯಾವಂತ

7. ಕೆಳಗಿನ ಪದಗಳನ್ನು ಲಿಂಗ ಬದಲಿಸಿ ಬರೆಯಿರಿ. 1

ಕುಳ್ಳ ದಾಸಿ

8. ಕೆಳಗಿನ ಪದಗಳನ್ನು ವಚನ ಬದಲಿಸಿ ಬರೆಯಿರಿ. 1

ರಾಣಿ ಸಾಕ್ಷಿಗಳು

9. ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ. 1

ವಿದ್ಯಾರ್ಥಿಗಳು ರಾಷ್ಟ್ರಗೀತೆಯನ್ನು ಹಾಡಿದರು.

10. ಅವನು ನಾಳೆ ಬೆಂಗಳೂರಿಗೆ ಹೋಗುತ್ತಾನೆ – ಇಲ್ಲಿರುವ ಸರ್ವನಾಮ ಗುರುತಿಸಿ ಬರೆಯಿರಿ. 1

11. ನಿಮಗೆ ಬೇಕಾದ ಒಂದು ಗಾದೆ ಮಾತನ್ನು ವಿವರಿಸಿ. 2

೧. ಮನಸ್ಸಿದ್ದರೆ ಮಾರ್ಗ.

೨. ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು.

## ವಿಭಾಗ–D (ಪಠ್ಯಗಳ ಅಧ್ಯಯನ) : *(50 ಅಂಕಗಳು)*

VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 14

1) ಶಿಕ್ಷಕರ ಬೆರಳು---ಮೇಲೆ ಹರಿದಾಡಿದವು.

೧) ಬೆನ್ನಿನ ೨) ಬಾಸುಂಡೆಯ ೩) ಕೆನ್ನೆಯ ೪) ಕೈ

2) ಕಿಟೆಲ್ ಭಾಮಿನಿ ಷಟ್ಪದಿಯಲ್ಲಿ ಬರೆದ ಕೃತಿ.

೧) ಶಬ್ದಮಣಿ ದರ್ಪಣ ೨) ಛಂದೋಂಬುಧಿ ೩) ಕ್ರಿಸ್ತ ಚರಿತ್ರೆ ೪) ವಡ್ಡಾರಾಧನೆ

3) ಪರಿಸರ ಶುಚಿ ರಕ್ಷಣೆ ಹಾಗೂ ಸಂರಕ್ಷಣೆ-------ಕೆಲಸವಲ್ಲ.

೧) ಒಂದು ದಿನದ೨) ಪ್ರತಿ ದಿನದ ೩) ಒಂದು ತಿಂಗಳದ ೪) ಒಂದು ವರ್ಷದ

4) ಬಯಲಾಟದಲ್ಲಿ ಉಪಯೋಗಿಸುವ ವಿಶೇಷ ವಾದ್ಯ :

೧) ತಬಲಾ ೨) ಹಾರ್ಮೋನಿಯಂ ೩) ಕ್ಯಾಶಿಯೋ ೪) ಮುಖವೀಣೆ.

5) ಭಾರತೀಯ ರಾಷ್ಟ್ರೀಯ ಸೇನೆಯಲ್ಲಿದ್ದ ಸೈನಿಕರ ಸಂಖ್ಯೆ :

೧) 10,000 ೨) 20,000 ೩) 25,000 ೪) 30,000

6) ಈ ದಿನವನ್ನು ವಿಶ್ವಪರಿಸರ ದಿನವೆಂದು ಆಚರಿಸುತ್ತಾರೆ.

೧) ಜುಲೈ–೬ರಂದು ೨) ಜೂನ್–೫ರಂದು ೩) ಅಗಷ್ಟ್–೬ ರಂದು ೪) ಜೂನ್ ೨೨ ರಂದು

7) ಬಯಲಾಟ ಕಲಿಸುವವನಿಗೆ -----ಎಂದು ಕರೆಯುತ್ತಾರೆ.

೧) ಶಿಕ್ಷಕ ೨) ಮಾರ್ಗದರ್ಶಕ ೩) ನಿರ್ದೇಶಕ ೪) ಭಾಗವತ

8) ಅಲ್ಲಮನ ವಚನಗಳ ಅಂಕಿತ :

೧) ಕೂಡಲಸಂಗಮದೇವ ೨) ಚನ್ನಮಲ್ಲಿಕಾರ್ಜುನ ೩) ಗುಹೇಶ್ವರ ೪) ಪುರಂದರವಿಠಲ.

9) ನಮ್ಮ ಕೇತನ ಮೆರೆಯುತಿರಲಿ :

೧) ತಲೆಯನೆತ್ತಿ ೨) ಹಿಮಾಲಯದಲ್ಲಿ ೩) ಕಾಶ್ಮೀರ ಕಣಿವೆಯಲ್ಲಿ ೪) ದೆಹಲಿಯಲ್ಲಿ

10) ತುಂಬಿದ ಕುಣಿಗಲ್ ಕೆರೆಯನ್ನು ಇದಕ್ಕೆ ಹೋಲಿಸಲಾಗಿದೆ.

೧) ಬಾಳೆಹಣ್ಣು ೨) ಲಿಂಬೆ ಹಣ್ಣು ೩) ಮಾವಿನ ಹಣ್ಣು ೪) ಹಲಸಿನ ಹಣ್ಣು

11) ಚೊಕ್ಕವಾದ ಚಿನ್ನ ----ಬಣ್ಣಗಳಿಂದ ತುಂಬಿದೆ.

೧) ೧೨ ೨) ೧೬ ೩) ೨೦ ೪) ೨೪

12) ಶವ ಸಂಸ್ಕಾರ ಮಾಡಲು ಹರಿಶ್ಚಂದ್ರ ರಾಜನು ಕೇಳಿದುದು:

೧) ನೂರು ವರಹ ೨) ಒಂದು ನಾಣ್ಯ ೩) ಮಂಗಲಸೂತ್ರ ೪) ಧಾನ್ಯ

13) ಅಲ್ಲಮ _____ ಗ್ರಾಮವನ್ನು ಸುಡುಗಾಡು ಎಂದು ಕರೆದಿದ್ದಾನೆ :

೧) ಜಲವಿಲ್ಲದ ೨) ಫಲವಿಲ್ಲದ ೩) ಜನವಿಲ್ಲದ ೪) ಭಕ್ತನಿಲ್ಲದ.

14) ಕೈವಾರ ನಾರಾಯಣಪ್ಪನವರ ಅಂಕಿತ :

೧) ಅಮರ ನಾರೇಯಣ. ೨) ವೀರ ನಾರಾಯಣ.

೩) ಗದುಗಿನ ನಾರಾಯಣ. ೪) ಲಕ್ಷೀನಾರಾಯಣ.

VII. ಕೆಳಗಿನ ಪ್ರಶ್ನೆಗಳಿಗೆ ೨–೩ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 * 4=8

1. ರಿವರ್ ವಾರ್ಡನ್‌ಗಳೆಂದರೆ ಯಾರು ?
2. ಸ್ತ್ರೀ ಪಾತ್ರದ ಕುಣಿತದ ಶೈಲಿ ಹೇಗೆ ಇರುತ್ತದೆ ?
3. ಕಾಂತಿಯ ಬಣ್ಣ ಕತ್ತಲೆಯನ್ನು ಹೇಗೆ ಬಿಡಿಸುತ್ತದೆ ?
4. ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತ್ತಿತ್ತು ?

VIII.ಕೆಳಗಿನ ಪ್ರಶ್ನೆಗಳಿಗೆ ೫–೬ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 3*6=18

1) ಕೋಡಂಗಿಯ ವೇಷಭೂಷಣಗಳು ಯಾವುವು ?

2) ಸುಭಾಸ್ ಚಂದ್ರಭೋಸರು ವಿಧಿವಶರಾದ ಬಗೆ ಹೇಗೆ?

3) ಸಂದರ್ಭದೊಂದಿಗೆ ವಿವರಿಸಿ.

ವಾಹನಗಳಿಗೆ ಸಿಕ್ಕು ಅಪ್ಪಚ್ಚಿಯಾಗುತ್ತವೆ

ಅಥವಾ

ದೇಶಪ್ರೇಮಿಗಳೇ, ನನಗೆ ನಿಮ್ಮ ಶಕ್ತಿ ನೀಡಿ, ನಾನು ನಿಮಗೆ ಸ್ವತಂತ್ರ ಭಾರತವನ್ನು ನೀಡುತ್ತೇನೆ.

4) ಈ ನಾಡು ಹೇಗೆ ಬೆಳೆ ಬೆಳೆಯಬೇಕು?

5) ಬಾಳೆ ಮೀನುಗಳು ಬೊಬ್ಬೆಹೊಡೆಯಲು ಕಾರಣವೇನು ?

6) ಸಂದರ್ಭದೊಂದಿಗೆ ವಿವರಿಸಿ.

ಉರಿವ ಲೋಕದ ನರಕ ಉರಿದು ಕೊನೆಗಾಣಲಿ.

ಅಥವಾ

ಪ್ರೇತ ಜಡಾರಣ್ಯಗಳಲ್ಲಿ ಹೋಗಬಹುದೇ ?

IX. ಕೆಳಗಿನ ಪ್ರಶ್ನೆಗಳಿಗೆ ೮–೧೦ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 5*2=10

1) ಕಿಟೆಲ್ಲರು ಕನ್ನಡ ನಿಘಂಟು ರಚಿಸುವಲ್ಲಿ ಪಟ್ಟ ಶ್ರಮ ಮನವರಿಕೆ ಮಾಡಿಕೊಡಿ.

ಅಥವಾ

ಸಹಾಯಕ ಶಿಕ್ಷಕರ ಮನಸ್ಸು ಕರಗಿಸಿದ ಘಟನೆಯನ್ನು ವಿವರಿಸಿ

2) ಲೋಹಿತಾಶ್ವನ ಶವಸಂಸ್ಕಾರದ ಸಂದರ್ಭದಲ್ಲಿ ಚಂದ್ರಮತಿಯ ಶೋಕ ಮತ್ತು ಅವಳ ಕರುಣಾಜನಕ ಸ್ಥಿತಿಯನ್ನು ವಿವರಿಸಿ.

ಅಥವಾ

ನಮ್ಮ ಬಲ ಕವಿತೆಯ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## SAMPLE PAPER FOR SUMMATIVE ASSESSMENT - I **Set I**

## FIRST TERM 2011-12

**SUB : KANNADA** **CLASS – X** **M.MARKS: 80** **TIME: 3 Hrs**

***ಸೂಚನೆಗಳು :*** *1. ಈ ಪ್ರಶ್ನೆ ಪತ್ರಿಕೆಯು ಎ,ಬಿ,ಸಿ, ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.*

- *ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು*
- *ವಿಭಾಗ–B (ಬರವಣಿಗೆ ಕೌಶಲ) : 14 ಅಂಕಗಳು*
- *ವಿಭಾಗ–C (ಅನ್ವಯಿಕ ವ್ಯಾಕರಣ) : 14 ಅಂಕಗಳು*
- *ವಿಭಾಗ–D (ಪಠ್ಯಗಳ ಅಧ್ಯಯನ) : 40 ಅಂಕಗಳು*

### ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : (*12 ಅಂಕಗಳು*)

I. 1. ಈ ಕೆಳಗಿನ ಗದ್ಯ ಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ.

ಮನುಷ್ಯನ ಜೀವನದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳ ಪಾತ್ರ ಮಹತ್ತರವಾದುದು. ಅವನ ಬದುಕಿನಲ್ಲಿ ನಡೆಯುವ ಅನೇಕ ದುರಂತಗಳಿಗೆ, ಹಿಂಸೆಗಳಿಗೆ ಇವು ಕಾರಣವಾಗಿವೆ.ಇವುಗಳಿಂದ ಮನುಷ್ಯನು ತಪ್ಪು ದಾರಿಯಲ್ಲಿ ನಡೆಯುತ್ತಿದ್ದಾನೆ. ಇವುಗಳ ಭಾರದಿಂದ ಹೃದಯವಂತಿಕೆ ನಾಶವಾಗುತ್ತಿದೆ.

ಅರಿಷಡ್ವರ್ಗಗಳಲ್ಲಿ ಕ್ರೋಧವು ವ್ಯಾಧನಿದ್ದಂತೆ, ಜೀವನದ ಕೈ ತೋಟವನ್ನು ಸಹ ಅರಣ್ಯವೆಂದು ತಿಳಿದುಕೊಂಡು ಅದು ಹಾಳು ಮಾಡಬಲ್ಲದು. ಹೀಗೆ ಸಿಟ್ಟುಬಂದಾಗ ರಕ್ತವು ಸುಡುವುದಲ್ಲದೆ ಜೀವನದ ಎಣ್ಣೆಯೂ ಸುಡುವುದು. ಬತ್ತಿಯೂ ಸಣ್ಣದಾಗುವುದು. ಕ್ರೋಧವನ್ನು ಎರಡು ತೆರನಾಗಿ ವಿಂಗಡಿಸಬಹುದು; ಒಂದು ಪಿಶಿತನ, ಇನ್ನೊಂದು ಕೊಚ್ಚಿಕೊಂಡು ಬಂದು ಹೋಗುವ ಹೊನಲಿನಂತಹ ಪ್ರವಾಹ. ಪಿಶಿತನವು ಮನಸ್ಸಿಗೆ ಬಡಿದುಕೊಂಡ ಪಿಶಾಚಿಯಂತೆ. ಮನಸ್ಸಿನಲ್ಲಿ ಮನೆಮಾಡಿಕೊಂಡು ಮನಸ್ಸನ್ನೇ ಅದು ದಿನಾಲು ತಿನ್ನುವುದು. ಕ್ರೋಧವನ್ನು ಗೆಲ್ಲಬೇಕಾದರೆ ಸಹನೆ, ತಾಳ್ಮೆ ಅವಶ್ಯಕ. ಮೌನವು ಇದಕ್ಕೆ ಸಹಕಾರಿ. ತಾಳ್ಮೆ ಮೌನಗಳಿಂದ ಪಿಶಿತನವನ್ನು ಗೆಲ್ಲಬೇಕು. ಮಾನವೀಯ ಅಪೂರ್ಣತೆಯನ್ನು ಕರುಣಾ ಪೂರಿತ ದೃಷ್ಟಿಯಿಂದ ನೋಡುವುದರಿಂದ ಇದು ಸಾಧ್ಯವಾದೀತು.

ಅಸೂಯೆಯು ವ್ಯಕ್ತಿತ್ವದ ಘಟ್ಟಕ್ಕೆ ಇದ್ದ ತೂತು. ಇಂಥ ರಂಧ್ರವು ಇದ್ದ ಪಕ್ಷದಲ್ಲಿ ವ್ಯಕ್ತಿತ್ವದ ಸಾರವು ಹನಿಹನಿಯಾಗಿ ವ್ಯಯಿಸಿ ಹೋಗುವುದುಂಟು. ಅದು ಹಾವಿನ ವಿಷವಿದ್ದಂತೆ. ವ್ಯಯಿಸಿದಷ್ಟು ವಿಷ ಮತ್ತೆ ಆ ರಚನೆಯಲ್ಲಿ ಸಂಗ್ರಹವಾಗುತ್ತ ನಡೆದು ವ್ಯಕ್ತಿತ್ವದ ಶರೀರದಲ್ಲಿಯೇ ವಿಷದ ಉಗಮಕ್ಕೆ ಒಂದು ಸ್ಥಾನವು ದೊರೆಯುತ್ತದೆ. ಕೀಳು ಜನರ ಉತ್ಕರ್ಷವನ್ನು ಸಹ ಅಸಹನೆಯಿಂದ ನೋಡಬಾರದು. ನಮಗಿಂತ ಮೇಲಿನವರನ್ನು ಕಂಡು ಅಸೂಯೆಪಡಬಾರದು.

ಪ್ರಶ್ನೆಗಳು :–

| | |
|---|---|
| ಅ. ಅರಿಷಡ್ವರ್ಗಗಳು ಯಾವುವು? | 2 |
| ಆ. ಕ್ರೋಧವನ್ನು ಗೆಲ್ಲುವುದು ಹೇಗೆ? | 2 |
| ಇ. ಮನಸ್ಸಿಗೆ ಬಡಿದ ಪಿಶಾಚಿ ಯಾವುದು? | 1 |
| ಈ. ವ್ಯಕ್ತಿತ್ವದ ಘಟಕ್ಕೆ ಇದ್ದ ತೂತು ಯಾವುದು? | 1 |

2 ಈ ಕೆಳಗಿನ ಪದ್ಯ ಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ.

### ಬಾಂಧವ್ಯ

ಪ್ರತಿಯೊಂದು ಜೀವಕ್ಕು ಇನ್ನೊಂದು ಪೂರಕವಯ್ಯ
ಜೀವ ಜೀವದ ನಂಟು ಬ್ರಹ್ಮಗಂಟು .

ಇಲ್ಲಿನೀ ನೆಲ, ನೀರು, ಗಾಳಿ, ಬಾಗಿದ ಬಾನು
ಎಲ್ಲರಿಗೂ; ನಮಗೆ ನಿಮಗಷ್ಟೆ ಅಲ್ಲ;
ಒಂದೆ ಜೀವದ ಅನಂತ ರೂಪಾಂತರದ ವಿಲಾಸ,
ವಿಕಾಸಕ್ಕೆ ಏಕತೆಯ ಅರಿವಗತ್ಯ.

ನಾಯಿಗಳು, ಬೆಕ್ಕುಗಳು, ಅಳಿಲು, ಹಸು, ಕುರಿ, ಕುದುರೆ;
ಹುಲಿ,ಸಿಂಹ, ನರಿ, ತೋಳ, ಹಾವು, ಚೇಳು;
ತೆಂಗು,ಹಲಸು, ಮಾವು; ಬೇವು, ತೊಣಚಿ ಜಾಲಿ–
ನಮ್ಮೊಳಡಗಿರುವ ಬಾಂಧವರು.

ದ್ವೇಷಹಿಂಸೆಗಳಾಚೆ, ಭಯ ಸಹಾನುಭೂತಿಗಳಾಚೆ
ಬಾಂಧವ್ಯದರಿವು ಪಡಿ ಮೂಡಿದಾಗ;
ಪರಿಪೂರ್ಣವಾಗಬಲ್ಲುದು ಇಲ್ಲಿನೀ ಬದುಕು
ಪ್ರೀತಿಸುವುದನ್ನು ತಿಳಿ, ಬದುಕಲು ಕಲಿ.

ಕೊಲ್ಲುವುದು ಮನುಷ್ಯ ಲಕ್ಷಣವಲ್ಲ, ಹೆಚ್ಚಳವಲ್ಲವೇ ಅಲ್ಲ,
ಬದುಕುವುದು,ಬದುಕ ಬಿಡುವುದು, ಬೆಳೆವುದು–
ಮಾನವತ್ವದ ಮಹತ್ವ ಇಲ್ಲಿ ಇದೆ ತಿಳಿಯೋಣ:
ಒಂದು ಅಳಿದರೆ ಉಳಿದುದೆಲ್ಲ ಮುಕ್ಕು.

– ಎಂ. ಗೋಪಾಲಕೃಷ್ಣ ಅಡಿಗ.

ಪ್ರಶ್ನೆಗಳು :–

ಅ. ಜೀವ ಜೀವದ ನಂಟು ಯಾವುದು? 1

ಆ. ವಿಕಾಸಕ್ಕೆ ಯಾವುದು ಅಗತ್ಯ? 1

ಇ. ನಮ್ಮೊಳಗಿರುವ ಬಂಧುಗಳು ಯಾರು? 2

ಈ. ನಾವು ಬದುಕಿನಲ್ಲಿ ಏನನ್ನು ತಿಳಿಯಬೇಕು? 2

## ವಿಭಾಗ–B (ಬರವಣಿಗೆ ಕೌಶಲ) : (14 ಅಂಕಗಳು)

II ಈ ಕೆಳಗಿನ ಯಾವುದಾದರು ಒಂದು ವಿಷಯವನ್ನು ಕುರಿತು ೧೫೦ ಶಬ್ದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ 6

೧. ಇಂದಿನ ಶಿಕ್ಷಣ ೨ ವರದಕ್ಷಿಣೆಯ ಪಿಡುಗು ೩ ಕ್ರೀಡೆಗಳ ಮಹತ್ವ

III ನೀವು ಜೆ.ಜಗದೀಶ, ಬೆಳಗಾವಿ ಜಿಲ್ಲೆಯವರೆಂದು ತಿಳಿದು ನಿಮ್ಮ ಜಿಲ್ಲೆಯಲ್ಲಿ ತಲೆದೋರಿರುವ ಬರಗಾಲದ ಬವಣೆಯನ್ನು ವಿವರಿಸಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಿರಿ

ಅಥವಾ

ನೀವು ಎನ್. ರಾಜು, ಬೇಂದ್ರೆ ನಗರ ಧಾರವಾಡ ಎಂದು ತಿಳಿದು ದಿನಾಂಕ. 16-8-2011 ರ ವಿಜಯಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಮೇರೆಗೆ ಕೆ.ಎಲ್.ಇ.ಶಿಕ್ಷಣ ಸಂಸ್ಥೆ ಬೆಳಗಾವಿ ಇಲ್ಲಿ ಖಾಲಿ ಇರುವ ಕನ್ನಡ ಶಿಕ್ಷಕ ಹುದ್ದೆಗಾಗಿ ಅರ್ಜಿ ಸಲ್ಲಿಸಿ. 4

IV ನೀವು ಎಸ್. ವಿಜಯ, ಸರ್ಕಾರಿ ಪ್ರೌಢ ಶಾಲೆ ಮಂಗಳೂರು ಎಂದು ಭಾವಿಸಿ ನಿಮ್ಮ ಶಾಲೆಯಲ್ಲಿ ಜೂನ್ 5 ರಂದು ಆಚರಿಸಿದ ವಿಶ್ವಪರಿಸರ ದಿನಾಚರಣೆಯ ಬಗ್ಗೆ ವರದಿ ತಯಾರಿಸಿ. 4

## ವಿಭಾಗ–C (ವ್ಯಾಕರಣ) : (14 ಅಂಕಗಳು)

V. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.

1 ಈ ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯ ಹೆಸರು ತಿಳಿಸಿ. 2

೧ ಸಿರಿಗನ್ನಡ ೨ ರಥೋತ್ಸವ

2 ಈ ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸದ ಹೆಸರು ತಿಳಿಸಿ. 2

೧ ಮುಡಿಕಟ್ಟಿ ೨ ಮುಂದಲೆ

3 ಈ ಕೆಳಗಿನ ಪದಗಳಿಗೆ ತತ್ಸಮ – ತದ್ಭವ ರೂಪಗಳನ್ನು ಬರೆಯಿರಿ. 1

೧ ಶ್ರೇಣಿಕಾ ೨ ಉಜ್ಜುಗ

4 ಈ ಕೆಳಗಿನ ನುಡಿಗಟ್ಟು / ಪದವನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ. 1

ಕಾಲಿಗೆ ಬುದ್ಧಿಹೇಳು

5 ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ 1

೧ ಶಕ್ತ ೨ ಅಂತರಂಗ

6 ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ. 1

೧ ಶಬರ ೨ ಋತ

7 ಈ ಕೆಳಗಿನ ಪದಗಳಿಗೆ ಜೋಡು ಪದ ಬರೆಯಿರಿ. 1

೧ ತಿಂಡಿ ೨ ಕೆರೆ

8 ಈ ಕೆಳಗಿನ ಪದಗಳಲ್ಲಿ ಇರುವ ವಿಭಕ್ತಿ ಪ್ರತ್ಯಯ ಗುರುತಿಸಿ ಬರೆಯಿರಿ. 1

೧ ಅಂಗಳದಲ್ಲಿ ೨ ಗೌರಿಯನ್ನು

9. ಇದು ಅನುಕರಣಾವ್ಯಯ. 1

೧ ಜುಳುಜುಳು ೨ ಮನೆಮನೆ ೩ ಕಸಕಡ್ಡಿ ೪ ಶಾಲೆ–ಗೀಲೆ

10. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ. 1

ಬೆಂಗಳೂರು : ಅಂಕಿತನಾಮ :: ಮೂಗ : ___________

11. ನಿಮಗೆ ಬೇಕಾದ ಒಂದು ಗಾದೆ ಮಾತನ್ನು ವಿವರಿಸಿ. 2

೧ ಕಟ್ಟುವುದು ಕಠಿಣ, ಕೆಡಹುವುದು ಸುಲಭ.

೨. ಊಟಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

## ವಿಭಾಗ–D (ಪಠ್ಯಗಳ ಅಧ್ಯಯನ) : (*40 ಅಂಕಗಳು*)

VI ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 14

1. ಬುದ್ಧದೇವನ ನಗು ಇದು.

೧) ಸರಸ ನಗೆ ೨) ಮುಗುಳುನಗೆ ೩) ರಸ ನಗೆ ೪) ಕಟಕಿನಗೆ

2. ನಕ್ಕಾಗ ಮುಖದಲ್ಲಾಗುವ ಬದಲಾವಣೆ :

೧) ಮುಖ ಅರಳುತ್ತದೆ ೨) ಮುಖ ಸೌತೆಕಾಯಿಯಂತೆ ಆಗುತ್ತದೆ

೩) ಮುಖ ಕಿರಿದಾಗುತ್ತದೆ ೪) ಮೇಲಿನ ಯಾವುದೂ ಅಲ್ಲ

3.ಸಿದ್ದಪ್ಪನ ಕಣ್ಣಿನಿಂದ ನೀರು ಜಾರಿ ಎಸರಿನೊಳಕ್ಕೆ ಬಿದ್ದದ್ದು.

೧) ಮೊಮ್ಮಗನ ಜ್ವರ ನೆನೆದು ೨) ಹೆಂಡತಿಯನ್ನು ನೆನೆದು

೩) ಗೌರಿಯ ತಾಯಿಯನ್ನು ನೆನೆದು ೪) ಮಗನ ಮಾತಿನಿಂದ

4 ತ್ಯಾಗಮಯಿ ಪಾಠದ ಕರ್ತೃ:

೧) ದುರ್ಗ ಸಿಂಹ ೨) ಪ್ರಭುಶಂಕರ

೩) ಎಚ್.ಜೆ.ಲಕ್ಕಪ್ಪ ಗೌಡ ೪) ಎಂ.ಎಸ್.ಸುಂಕಾಪುರ

5 ಶಕ್ತಿಯೇ ಜೀವನ, ದುರ್ಬಲತೆಯೇ---

೧) ಜನನ ೨) ಮನನ ೩) ಮರಣ ೪) ಸಂಯಮ

6. ರಕ್ಷಣಾ ಪಡೆಗಳು ಇದರ ಸಂಕೇತ

೧) ಅನೈಕ್ಯತೆ ೨) ರಾಷ್ಟ್ರೀಯ ಭಾವೈಕ್ಯತೆ ೩) ಧಾರ್ಮಿಕತೆ ೪) ವೈಚಾರಿಕತೆ

7. ಶಕ್ತನಾದರೆ ನೆಂಟರೆಲ್ಲ ಹಿತರು, ಅಶಕ್ತನಾದರೆ ಆಪ್ತಜನರೇ________

೧) ಬಂಧುಗಳು ೨) ವೈರಿಗಳು ೩) ಮಿತ್ರರು ೪) ತಂದೆ ತಾಯಿಗಳು

8.ವ್ಯಾಸ, ವಾಲ್ಮೀಕಿ ಭಾರತದ ಈ ಭಾಗದವರು.

೧) ಮೂಡಣ ೨) ಪಡುವಣ ೩) ತೆಂಕಣ ೪) ಬಡಗಣ

9.ಕವಿ ಕಾಮಧೇನುವಿನ ಕೆಚ್ಚಲಿಗೆ ಹೋಲಿಸಿರುವುದು.

೧) ಆರ್ಯ ಭಾಷೆಗಳನ್ನು ೨) ದ್ರಾವಿಡ ಭಾಷೆಗಳನ್ನು

೩) ಯೂರೋಪಿಯನ್ ಭಾಷೆಗಳನ್ನು ೪) ಲ್ಯಾಟಿನ್ ಭಾಷೆಗಳನ್ನು

10.ಅಚಲವಾದ ಸ್ವರವಿದು.

೧) ರಾಗ ನಾದ ಕುಂಕುಮ　　೨) ರಾಗ ನಾದ ಅರಿಶಿಣ

೩) ರಾಗ ನಾದ ಕುಸುಮ　　೪) ರಾಗ ನಾದ ಗಂಧ

11. ರಾಮಾಯಣವು ಇದರಿಂದ ಕೂಡಿದೆ.

೧) ಸಿಂಹ ಘರ್ಜನೆ　　೨) ಸಾತ್ವಿಕ ಕೋಕಿಲ

೩) ನದಿ ವನಗಳಿಂದ　　೪) ಕುಸುಮಗಳಿಂದ

12.ಶಬರನ ಕೆಲಸವಿದು.

೧) ಅಲೆಯುವುದು　　೨) ಬೇಟೆಯಾಡುವುದು

೩) ಯುದ್ಧ ಮಾಡುವುದು　　೪) ತಪಸ್ಸು ಮಾಡುವುದು

13. ಶಿವ ಅರ್ಜುನನನ್ನು ಪರೀಕ್ಷಿಸಲು ಬಂದ ರೂಪ.

೧) ಜಿಂಕೆಯ ರೂಪ　　೨) ಶಬರನ ರೂಪ

೩) ತಬರನ ರೂಪ　　೪) ಹಂದಿಯ ರೂಪ

14. ಹರಿಗೋಲು ನಡೆಸಲು ಇದು ಬೇಕು.

೧) ಕೋಲು　　೨) ತೆಪ್ಪ　　೩) ಕಡೆಗೋಲು　　೪) ಹುಟ್ಟು

VII. ಕೆಳಗಿನ ಪ್ರಶ್ನೆಗಳಿಗೆ ೫–೬ ವಾಕ್ಯಗಳಲ್ಲಿ ಉತ್ತರ ಬರೆಯಿರಿ.　　3*6=18

1. ನಗೆಯಿಂದ ಹೊರಡುವ ಸ್ವರಗಳಾವುವು?
2. ಚಾಣಕ್ಯನ ಪ್ರಕಾರ ಮೂರು ಬಗೆಯ ಯುದ್ಧಗಳಾವುವು? ವಿವರಿಸಿ.
3. ಸಂದರ್ಭದೊಡನೆ ವಿವರಿಸಿ.

    ನನಗೆ ನಿನಗೆ ಪ್ರಾಣ ಕೊಟ್ಟ ದೇವತೆ.

    ಅಥವಾ

    ಈ ಸಭಾಗೃಹದಲ್ಲಿರುವ ಅರ್ಧದಷ್ಟು ಜನ ಕತ್ತೆಗಳಲ್ಲ.
4. ಸತಿ,ಸ್ನೇಹ ಮತ್ತು ಬಯಕೆಗಳ ವಿಚಾರದಲ್ಲಿ ಕನಕದಾಸರ ಅಭಿಪ್ರಾಯವೇನು?
5. ಪ್ರಜಾಮಾತೆಯ ವೈಶಿಷ್ಟ್ಯವೇನು?
6. ಸಂದರ್ಭದೊಡನೆ ವಿವರಿಸಿ.

    ಬೆಲ್ಲ ಬೇವಾಗುವುದವನಿಗೆ

    ಅಥವಾ

    ಮಾವು ಬೇವು ಫಲ ಬಲಾಬಲ.

VIII. ಕೆಳಗಿನ ಪ್ರಶ್ನೆಗಳಿಗೆ ೮–೧೦ ವಾಕ್ಯಗಳಲ್ಲಿ ಉತ್ತರ ಬರೆಯಿರಿ.　　4*2=8

1 ಸೈನ್ಯದಲ್ಲಿರುವ ತರಬೇತಿ ಸೌಲಭ್ಯಗಳ ಬಗ್ಗೆ ಟಿಪ್ಪಣಿ ಬರೆಯಿರಿ.

ಅಥವಾ

ಶಕ್ತಿಯ ಮಹತ್ವವನ್ನು ವಿವರಿಸಿ.

2. ಭರತಭೂಮಿಯ ವರಪುತ್ರನಾಗ ಬಯಸುವವನು ಹೇಗೆ ಬೆಳೆದು ಬಾಳಬೇಕು?

ಅಥವಾ

ಕಿರಾತಾರ್ಜುನರ ಸಂಭಾಷಣೆಯನ್ನು ನಿಮ್ಮ ಮಾತಿನಲ್ಲಿ ವಿವರಿಸಿ.